ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **23.01.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ: ವಕೀಲರ ಮೂಲಕ ಃ

**8.** ನನ್ನ ಅಜ್ಜಿ ವಾದಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಸ್ವಲ್ಪ ಮಾತನಾಡುತ್ತಿದ್ದರು ಎಂದು ವಾದ ಪತ್ರದಲ್ಲಿ ಬರೆಸಿರುತ್ತೇವೆ. ಸದರಿ ಸಂಗತಿಯನ್ನು ವಾದಪತ್ರದಲ್ಲಿ ಬರೆದಿರುವ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ವಾದಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಬರುವುದಿಲ್ಲವೆಂದು ನಿಪಿ **1** ರಲ್ಲಿ ಬರೆಸಿರುತ್ತೇವೆ. ವಾದಿಗೆ ಯಾವಾಗ ಸಂಪೂರ್ಣವಾಗಿ ಮಾತು ನಿಂತಿರುತ್ತದೆ ಮತ್ತು ಯಾವಾಗ ಸ್ವಲ್ಪ ಮಾತನಾಡುತ್ತಿದ್ದರು ಎಂದು ದಿನಾಂಕ ಗೊತ್ತಿರುವುದಿಲ್ಲ. ನಿಪಿ **1** ಮಾಡುವ ಕಾಲಕ್ಕೆ ವಾದಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಮಾಡಿಸಿರುವುದಿಲ್ಲ. ವಾದಿಯು ನಡೆಯಲು ಆಗುವುದಿಲ್ಲ ಮತ್ತು ಸಾಕ್ಷ್ಯ ಹೇಳಲು ಆಗುವುದಿಲ್ಲವೆಂದು ವೈದ್ಯರ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ.

**9.** ಪ್ರತಿವಾದಿಯು ಮೋಸ ಮಾಡಿ ದಾನ ಪತ್ರ ಬರೆಸಿಕೊಂಡಿರುತ್ತಾರೆ ಎಂದು ನನಗೆ ವಾದಿ ಹೇಳಿರುತ್ತಾರೆ. ದಾನ ಪತ್ರ ಯಾವಾಗ ಆಗಿರುತ್ತದೆ ಎಂಧು ಮತ್ತು ವಾದಿಯು ನನಗೆ ಪ್ರತಿವಾದಿಯು ಮೋಸ ಮಾಡಿ ದಾನಪತ್ರ ಬರೆಸಿಕೊಂಡಿರುತ್ತಾರೆ ಎಂಧು ಯಾವಾಗ ಹೇಳಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ವಾದಿಯೇ ಸ್ವ ಇಚ್ಚೆಯಿಂದ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿದ್ದು, ನಾನು ಬಲವಂತವಾಗಿ ನಿಪಿ **1** ದಾಖಲೆಯನ್ನು ಬರೆಸಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾನ ಪತ್ರ ಆದಾಗ ನಮ್ಮ ಗ್ರಾಮದ ನಾಗರಾಜು ಎಂಬುವವರು ಇದ್ದರು ಎಂದು ವಾದಿಯು ನನಗೆ ಹೇಳಿರುತ್ತಾರೆ. ಸದರಿಯವರ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ಮೋಸ ಮಾಡಿ ದಾನ ಪತ್ರ ಬರೆಸಿಕೊಂಡ ಬಗ್ಗೆ ನಾನು ನಾಗರಾಜುರವರನ್ನು ಭೇಟಿ ಮಾಡಿ ಕೇಳಿದ್ದು, ಅವರು ತನಗೆ ಅದರ ಬಗ್ಗೆ ಗೊತ್ತಿರುವುದಿಲ್ಲವೆಂದು ಹೇಳಿರುತ್ತಾರೆ. ಸದರಿ ನಾಗರಾಜುರವರು ದಾನ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ದಾನ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ಸದರಿ ಸಾಕ್ಷಿದಾರರ ಅಸ್ಥಿತ್ವದ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

**10.** ವಾದಿಯು ನೊಂದಣೀ ಕಛೇರಿಗೆ ಹೋಗಿ ಹೆಬ್ಬೆಟ್ಟು ಗುರುತು ಹಾಕಿ ತನ್ನ ಭಾವಚಿತ್ರವನ್ನು ತೆಗೆಸಿರುತ್ತಾರೆ ಎಂದರೆ ಸರಿ. ಅದೇ ರೀತಿ ದಾನ ಪತ್ರದಲ್ಲಿ ವಾದಿಯ ಪಕ್ಕದಲ್ಲಿರುವ ಫೋಟೋ ನನ್ನ ಮಾವ ಮಹದೇವುರವರದ್ದಾಗಿರುತ್ತದೆ. ದಾನ ಪತ್ರ ಬರೆಯಲು ವಾದಿಯ ಮಗ ಮಹದೇವು ಸಹ ಸಮ್ಮತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಮಹದೇವು ರವರು ನೊಂದಣಿ ಕಛೇರಿಗೆ ದಾನ ಪತ್ರ ಮಾಡುವಾಗ ಹೋಗಿರಲಿಲ್ಲ ಎಂದು ಹೇಳುವ ವಿಚಾರ ನನಗೆ ಯಾರಿಂದಲೂ ಗೊತ್ತಾಗಿರುವುದಿಲ್ಲ. ಸದರಿ ಮಹದೇವುರವರು

ತನಗೆ ಇದ್ದ ಆಸ್ತಿಗಳ ಮೇಲಿನ ಹಕ್ಕನ್ನು ವಾದಿಗೆ ಈ ಹಿಂದೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿ.

**11.** ನಿಪಿ **1** ಕ್ಕೆ ವಾದಿಯು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಇಂತಹ ಕಡೆ ಹೆಬ್ಬೆಟ್ಟಿನ ಗುರುತನ್ನು ಹಾಕಬೇಕು ಎಂದು ನಿಪಿ **1** ರಲ್ಲಿ ಗುರುತು ಮಾಡಿರುತ್ತಾರೆ ಎಂದರೆ ಸರಿ. ನಾನು ನಿಪಿ **1** ನ್ನು ತಯಾರು ಮಾಡಿಸಿ, ಬೇರೆಯವರ ಹೆಬ್ಬೆಟ್ಟಿನ ಗುರುತನ್ನು ಮಾಡಿಸಿದ್ದು, ಹೆಬ್ಬೆಟ್ಟಿನ ಗುರುತು ಸರಿಯಾಗಿ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ **1** ಕ್ಕೆ ಪಡುವಣಗೆರೆಯ ಕುಮಾರ್ ಎಂಬುವವರು ಸಹಿ ಮಾಡಿದ್ದು, ಅವರ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಗೆ ಡಿ.ಕೆ. ಹಳ್ಳಿಯ ಸಂಪತ್ತು ಎಂಬುವವರು ಸಹಿ ಮಾಡಿದ್ದು, ಅವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಕುಮಾರ್ ಎಂಬುವವರು ನಮ್ಮ ಗ್ರಾಮದವರು ಮತ್ತು ನಮ್ಮ ಸಂಬಂಧಿಕರು ಎಂದರೆ ಸರಿ. ವಾದಿಗೆ ದಾವೆ ನಡೆಸಲು ಇಚ್ಛೆ ಇಲ್ಲದೇ ಇದ್ದರೂ ಮತ್ತು ಅಧಿಕಾರ ಪತ್ರವನ್ನು ನೀಡುವ ಇಚ್ಛೆ ಇಲ್ಲದೇ ಇದ್ದರೂ ಸಹ ನಾವೆಲ್ಲ ಸೇರಿ ನಿಪಿ **1** ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**12.** ನಾನು ನಿಪಿ **4** ನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿದ್ದೇನೆ. ದಾನ ಕೊಡುವ ಸ್ವತ್ತನ್ನು ಇದೇ ದಿನ ಸ್ವಾಧೀನಕ್ಕೆ ಕೊಡುವುದಾಗಿ ನಿಪಿ **4** ರಲ್ಲಿ ಬರೆಯಲಾಗಿದೆ ಎಂದರೆ ಸರಿ. ದಾನದ ಸ್ವತ್ತು ಋಣಮುಕ್ತವಾಗಿದೆ ಎಂದು ನಿಪಿ**4** ರಲ್ಲಿ ಬರೆಯಲಾಗಿದೆ ಎಂದರೆ ಸರಿ, ಆದರೆ ಅದು ಸುಳ್ಳಾಗಿರುತ್ತದೆ. ದಾನದ ಮಾತುಕತೆಯಲ್ಲಿ ನಾನು ಭಾಗವಹಿಸಿರಲಿಲ್ಲ ಎಂದರೆ ಸರಿ. ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ, ಬೇರೆ ಸ್ವತ್ತುಗಳು ವಾದಿಗೆ ಅವರ ತಂದೆಯಿಂದ ಬಂದಿರುತ್ತವೆ ಎಂದರೆ ಸರಿ. ವಾದಿಗೆ ಸಾಕಷ್ಟು ಆಸ್ತಿಗಳು ಇದ್ದ ಕಾರಣ ತನ್ನ ಮಗಳಿಗೆ ಅನುಕೂಲ ಮಾಡಿಕೊಡಲು ಪ್ರತಿವಾದಿಗೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಆರೋಗ್ಯ ಸರಿ ಇಲ್ಲದ ಸಮಯದಲ್ಲಿ ಪ್ರತಿವಾದಿಯೇ ಅವರನ್ನು ನೋಡಿಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿ. ಈ ಎಲ್ಲಾ ಕಾರಣಗಳಿಂದ ಸ್ವ ಇಚ್ಛೆ ಯಿಂದ ಪ್ರೀತಿ ವಾತ್ಸಲ್ಯದಿಂದ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಧ್ಯವಾದರೆ ದಾವಾ ಸ್ವತ್ತನ್ನು ಪ್ರತಿವಾದಿಯಿಂದ ಕಸಿದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.